ರಾಜ್ಯದಲ್ಲಿ ಪಶು ವೈದ್ಯರ ನೇಮಕ

193 - ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಈಗ ಹಾಲಿ ಗೊತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ಪಶುವೈದ್ಯರ ಸಂಖ್ಯೆ ಎಷ್ಟು?*

ಆ) *ಅವರನ್ನು ಖಾಯಂಗೊಳಿಸುವ ಯೋಜನೆ ಸರ್ಕಾರದ ಮುಂದೆ ಇದೆಯೇ? ಹಾಗಿದ್ದಲ್ಲಿ ಈ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಳ್ಳಲಾಗಿದೆ? ಕ್ರಮ ತೆಗೆದು ಕೊಂಡಿದ್ದಲ್ಲಿ ಅವರುಗಳು ಎಷ್ಟು ವರ್ಷಗಳಿಂದ ಸೇವೆ ಮಾಡಿದ್ದನ್ನು ಸರ್ಕಾರ ಯಾವ ರೀತಿಯಲ್ಲಿ ಪರಿಗಣಿಸಲಾಗುವುದು?*

ಇ) *ಹಾಗಿದ್ದಲ್ಲಿ, ಇವರನ್ನು ಎಂದಿನಂತೆ ಖಾಯಂ ಗೊಳಿಸಲಾಗುವುದು.*

ಶ್ರೀ ಬಿ.ಎನ್. ಬಚ್ಚೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) 25.

ಆ) ಇದೆ. ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ

ಇ) ಉದ್ಭವಿಸುವುದಿಲ್ಲ.

ಬಾಗೇಪಲ್ಲಿ ತಾಲ್ಲೂಕು ತಿಮ್ಮಂಪಲ್ಲಿ ಸಬ್ ಸ್ಟೇಷನ್ ನಿರ್ಮಾಣ.

194 - ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೋಲಾರ ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕಿನ ತಿಮ್ಮಂಪಲ್ಲಿಯ ಹತ್ತಿರ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ವತಿಯಿಂದ ಒಂದು ಸಬ್-ಸ್ಟೇಷನ್ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ?*

ಆ) *ಹಾಗಿದ್ದಲ್ಲಿ, ಈ ವಿಷಯವು ಯಾವ ಹಂತದಲ್ಲಿದೆ?*

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯ ಮಂತ್ರಿಗಳು) :

ಅ) ಹೌದು.

ಆ) ಈ ಪ್ರಸ್ತಾವನೆಯನ್ನು ವಿವರವಾಗಿ ಪರಿಶೀಲಿಸಲಾಗುತ್ತಿದೆ.

ಕುಡಿಯುವ ನೀರಿನಲ್ಲಿಯರುವ ಫ್ಲೋರಾಯಿಡ್ ಅಂಶದ ನಿವಾರಣೆ.

195 - ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ (ಬಾಗೇಪಲ್ಲಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಡಿಯುವ ನೀರಿನಲ್ಲಿರುವ ಫ್ಲೋರೈಡ್ ಎಂಬ ವಿಷಪೂರಿತ ಲವಣದ ಅಂಶಗಳನ್ನು ನಿವಾರಿಸಿ ಜನರಿಗೆ ಸ್ವಚ್ಛವಾದ ನೀರನ್ನು ಕೊಡುವುದರ ಬಗ್ಗೆ ಸರ್ವೋಚ್ಚ ನ್ಯಾಯಾಲಯವು ಈ ವರ್ಷ ಫೆಬ್ರವರಿ ತಿಂಗಳಲ್ಲಿ ಎಲ್ಲಾ ರಾಜ್ಯಗಳಿಗೂ ನೀಡಿರುವ ನಿರ್ದೇಶವು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ವಿಷಯದ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪ. ರಾಜ್ಯ ಸಚಿವರು) :

ಅ) ಬಂದಿದೆ.

ಆ)

1. ರಾಜ್ಯಮಟ್ಟದ ಫ್ಲೋರೋಸಿಸ್ ನಿಯಂತ್ರಣ ಸಮಿತಿಯನ್ನು ನೇಮಿಸಲಾಗಿದೆ.
2. ಜಿಲ್ಲಾಮಟ್ಟದ ಸಮನ್ವಯ ಸಮಿತಿಯ ರಚನೆ ಕಾರ್ಯಕ್ರಮ ಪ್ರಗತಿಯಲ್ಲಿ ಧಾರವಾಡ ಗುಲ್ಬರ್ಗಾ ರಾಯಚೂರು ಮತ್ತು ತುಮಕೂರು ಜಿಲ್ಲೆಗಳಲ್ಲಿ 125 ಗ್ರಾಮಗಳ ಬದಲಿ ನೀರು ಸರಬರಾಜು ಯೋಜನೆ ಮತ್ತು ಫ್ಲೋರೈಡ್ ನಿಯಂತ್ರಣ ಘಟಕಗಳ ಯೋಜನೆಗಳ ಪ್ರಗತಿಯು ವಿವಿಧ ಹಂತದಲ್ಲಿದೆ.
3. ಫ್ಲೋರೈಡ್ ನಿಯಂತ್ರಣಕ್ಕಾಗಿ ಘಟಕಗಳ ಸ್ಥಾಪನೆಯ ಧಾರವಾಡ ಜಿಲ್ಲೆಯ 2 ಗ್ರಾಮಗಳಲ್ಲಿ ಪೂರ್ಣಗೊಳಿಸಿ ಮತ್ತೊಂದು ಗ್ರಾಮದಲ್ಲಿ ಪ್ರಗತಿಯಲ್ಲಿದೆ.
4. ಕೊಳವೆಬಾವಿಯ ಕೈಪಂಪಿಗೆ ಅಳವಡಿಸಿರುವ ಫ್ಲೋರೈಡ್ ನಿಯಂತ್ರಣ ಘಟಕಗಳ ಸ್ಥಾಪನೆ ಧಾರವಾಡ ಜಿಲ್ಲೆಯಲ್ಲಿ 2, ಮತ್ತು ಬಳ್ಳಾರಿ ಜಿಲ್ಲೆಯಲ್ಲಿ 1 ಸ್ಥಾಪಿಸಲಾಗಿದೆ.
5. ನೀರಿನ ವಿವಿಧ ಅಂಶಗಳ ಗುಣಮಟ್ಟದ ಪರೀಕ್ಷೆಗಾಗಿ ಪ್ರಯೋಗಾಲಯಗಳನ್ನು 6 ಜಿಲ್ಲೆಗಳಲ್ಲಿ (ಗುಲ್ಬರ್ಗಾ, ರಾಯಚೂರು, ಧಾರವಾಡ, ಮೈಸೂರು, ಬೆಳಗಾಂ, ಮತ್ತು ಮಂಗಳೂರು) ಸ್ಥಾಪಿಸಲಾಗಿದೆ. ಬೇರೆ 4 ಜಿಲ್ಲೆಗಳಲ್ಲಿ (ಬೆಂಗಳೂರು (ಗ್ರಾ), ಹಾಸನ, ತುಮಕೂರು ಕೋಲಾರ) ಇವುಗಳ ಕೆಲಸವು ಪ್ರಗತಿಯಲ್ಲಿದೆ. ಇನ್ನೂ 4 ಜಿಲ್ಲೆಗಳಲ್ಲಿ (ಚಿತ್ರದುರ್ಗ, ಕೊಡಗು, ಚಿಕ್ಕಮಗಳೂರು, ಉತ್ತರ ಕನ್ನಡ) ಪ್ರಯೋಗಾಲಯ ಸ್ಥಾಪಿಸಲು ಪ್ರಸ್ತಾವನೆ ಭಾರತ ಸರ್ಕಾರಕ್ಕೆ ಸಲ್ಲಿಸಲಾಗಿದೆ.
6. ಗ್ರಾಮಾಂತರ ಪ್ರದೇಶದಲ್ಲಿ ಫ್ಲೋರೈಡ್ ಪೀಡಿತ ಕಾಯಿಲೆಗಳ ಬಗ್ಗೆ ಪ್ರತಿ ಜಿಲ್ಲೆ ವೈದ್ಯಾಧಿಕಾರಿಗಳಿಂದ ಸಮೀಕ್ಷೆ ನಡೆಯಿಸಲಾಗುತ್ತಿದೆ.
7. ಫ್ಲೋರೈಡ್ ಪೀಡಿತ ಜಲಮೂಲಗಳಿಗೆ ಬದಲಾಗಿ ಅಥವಾ : ಫ್ಲೋಲೈಡ್ ಅಂಶ ಗೊತ್ತುಪಡಿಸಿರುವ ಗರಿಷ್ಠ 1.5.ಎಂಜಿ:ಎಳ್ ಮೇಲಿರುವ ಗ್ರಾಮಗಳಲ್ಲಿ ಬದಲಿ ಜಲಮೂಲಗಳ ಶೋಧನೆಗಾಗಿ ಮೊದಲನೇ ಹಂತದ ರೂ. 350.25 ಲಕ್ಷಗಳ ಪ್ರಸ್ತಾವನೆಯನ್ನು ಭಾರತ ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಲಾಗಿದೆ.

8. ಬಾಗೇಪಲ್ಲಿ ತಾಲ್ಲೂಕಿನ ಫ್ಲೋರೈಡ್ ಪೀಡಿತ ನೀರು ದೊರಕುವ ಗ್ರಾಮಗಳಲ್ಲಿ ಡ್ಯಾನಿಡಾ ಸಂಸ್ಥೆಯ ಸಹಕಾರದೊಂದಿಗೆ ಗೃಹೋಪಯೋಗಿ ನೀರು ಶೋಧಕಗಳ ಅಳವಡಿಕೆ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ.

ಪಶುಸಂಗೋಪನಾ ಇಲಾಖೆಯ ಸ್ವಂತ ಕಟ್ಟಡಗಳ ನಿರ್ಮಾಣ

197 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಪಶುಸಂಗೋಪನಾ ಇಲಾಖೆಗೆ ಎಷ್ಟು ಸ್ವಂತ ಕಟ್ಟಡಗಳಿವೆ.

ಆ) ಎಷ್ಟು ಕಛೇರಿಗಳು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ.

ಇ) ಸ್ವಂತ ನಿವೇಶನ ಹೊಂದಲು ಸರಕಾರದವರು ಕ್ರಮ ಕೈಗೊಡಿರುವರೆ?

ಶ್ರೀ ಬಿ.ಎನ್. ಬಚ್ಚೇಗೌಡ (ಪಶುಸಂಗೋಪನಾ ಸಚಿವರು):

ಅ) 1352.

ಆ) 80.

ಇ) ಪ್ರತಿ ವರ್ಷವೂ ಕಟ್ಟಡಗಳನ್ನು ಕಟ್ಟಲು ಸಂಬಂಧಪಟ್ಟ ಜಿಲ್ಲಾ ಪಂಚಾಯತಗಳು ಕ್ರಿಯಾ ಯೋಜನೆ ರೂಪಿಸಿಕೊಂಡು ಕಾರ್ಯರೂಪಗೊಳಿಸಲಾಗುತ್ತಿದೆ.

ಕಾರ್ಕಳ ತಾಲ್ಲೂಕಿನ ಕೇಮಾರಿನಲ್ಲಿ 220 ಕೆ.ವಿ. ಸಾಮರ್ಥ್ಯದ ವಿದ್ಯುತ್ ವಿತರಣಾ ಕೇಂದ್ರ.

198 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾರ್ಕಳ ತಾಲ್ಲೂಕಿನ ಕೇಮಾರಿನಲ್ಲಿ 220 ಕೆ.ವಿ.ಸಾಮರ್ಥ್ಯದ ವಿದ್ಯುತ್ ಉಪಕರಣ ಕೇಂದ್ರದ ಕಾಮಗಾರಿ ಪ್ರಾರಂಭಿಸಿದಿರಲು ಕಾರಣವೇನು?

ಆ) ಈ ವಿದ್ಯುತ್ ವಿತರಣಾ ಕೇಂದ್ರದ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಇ) ಈ ಯೋಜನೆಯನ್ನು ಯಾವಾಗ ಮುಕ್ತಾಯಗೊಳಿಸಲಾಗುವುದು?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಎಷಿಯನ್ನು ಡೆವಲಪೆಮೆಂಟ್ ಬ್ಯಾಂಕನ ನಿಯಮಾಳಿಯ ಅನುಸಾರ 'ಇಂಟರ್ ನ್ಯಾಷನಲ್ ಕಾಂಪಿಟೇಷನ್ ಬಿಡ್ಡಿಂಗ್' ಮೂಲಕವೇ ಪ್ರಮುಖ ಸಾಮಗ್ರಿ ಮತ್ತು ವಿದ್ಯುತ್ ಉಪಕರಣಗಳನ್ನು ಖರೀದಿಸಬೇಕಾಗಿರುವುದರಿಂದ ಕಾರ್ಕಳ ತಾಲ್ಲೂಕಿನ ಕೇಮಾರಿನಲ್ಲಿ 2209 ಕೆ.ವಿ. ವಿದ್ಯುತ್ ಸ್ವೀಕರಣಾ ಕೇಂದ್ರದ ಕಾಮಗಾರಿಯು ಪ್ರಾರಂಭಿಸುವಲ್ಲಿ ಸ್ವಲ್ಪ ಮಟ್ಟಿಗೆ ವಿಳಂಬ ಉಂಟಾಗಿದೆ.

ಆ) ಈ ವಿದ್ಯುತ್ ಸ್ವೀಕರಣ ಕೇಂದ್ರದ ಕಾಮಗಾರಿಯನ್ನು ಪ್ರಸಕ್ತ ಸಾಲಿನಲ್ಲಿಯೇ (1995-96) ಪ್ರಾರಂಭಿಸಲು ಉದ್ದೇಶಿಸಲಾಗಿದೆ.